ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 300 ಡಿಜಿಡಿ 2011

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:08-11-2011.

## ಸುತ್ತೋಲೆ

* * *

ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರು ಹಾಗೂ ಪ್ರಾಥಮಿಕ ಶಾಲಾ ಮತ್ತು ಪ್ರೌಢ ಶಾಲಾ ಸಹ ಶಿಕ್ಷಕರುಗಳನ್ನು ಬೋಧಕೇತರ ಕಾರ್ಯಗಳಿಗಾಗಿ ಬೇರೆ ಬೇರೆ ಕಛೇರಿಗಳಿಗೆ ನಿಯೋಜಿಸುವುದರಿಂದ ಶಾಲಾ ಕಾಲೇಜುಗಳಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕೆ ತುಂಬಲಾರದಷ್ಟು ನಷ್ಟವಾಗುತ್ತದೆ. ವಿದ್ಯಾರ್ಥಿಗಳ ಸಂವಿಧಾನಾತ್ಮಕ ಹಕ್ಕಿಗೆ ಧಕ್ಕೆ ಉಂಟಾಗುತ್ತದೆ ಎಂಬ ಕಾರಣದಿಂದ ಈ ಬಗ್ಗೆ ಹಲವಾರು ಸರ್ಕಾರದ ಆದೇಶ ಹಾಗೂ ಸುತ್ತೋಲೆಗಳನ್ನು ಹೊರಡಿಸಿ ಉಪನ್ಯಾಸಕರ/ಶಿಕ್ಷಕರ ನಿಯೋಜನೆಯನ್ನು ನಿಷೇಧಿಸಲಾಗಿದೆ. ಇದಲ್ಲದೇ ನ್ಯಾಯಾಲಯವು ಈ ಕೆಳಗಿನಂತೆ ತೀರ್ಪು ನೀಡಿವೆ. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ :13674/2006 ರಲ್ಲಿ ದಿನಾಂಕ :19-12-2006 ರಂದು ಈ ಕೆಳಗಿನಂತೆ ನಿರ್ದೇಶಿಸಿದೆ-

When this Writ Petition came up on 19/12/2006, learned Government Advocate was directed to place on record a statement as to whether any teacher is continuing as Private Secretary to any M.L.A. Though the Government Advocate has not filed the statement, as he received the instructions late, it is submitted by the Government Advocate that only four teachers are now continuing as Private Secretaries to M.L.As./M.Ps./Minitsters and that one teacher is on deputation to the Zilla Panchayat, Dharwad. It is also stated that even though the second respondent has written to the authorities concerned, it would appear that necessary orders cancelling the deputation of teachers have not been passed by them. In view of the shortage of teachers to teach the students in the various schools in the state, it is in public interest that deputation of teachers to work in other department is stopped. It is surprising that the direction issued in this regard by the second respondent has not been complied with by some of the authorities.

The second respondent shall also inform the Deputy Commissioners concerned that unless the deputation of the above mentioned teachers is cancelled and compliance is reported, this court will be constrained to initiate appropriate action against the Deputy Commissioners for willful disobedience of the directions of this court.

ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿನ ಮೇಲ್ಮನವಿ (ಸಿವಿಲ್) ಸಂಖ್ಯೆ :5659/2007 ರಲ್ಲಿ ದಿನಾಂಕ :06/12/2007 ರಂದು ನೀಡಿರುವ ತೀರ್ಪಿನಲ್ಲಿ ಈ ಕೆಳಗಿನಂತೆ ಆದೇಶಿಸಿದೆ.

We therefore, direct that all teaching staff shall be put on the duties of roll revisions and election works on holidays and non-teaching days. Teachers should not ordinarily be put on duty on teaching days and within teaching hours. Non-teaching staff, however, may be put on such duties on any day or at any time, if permissible in law.

ಹಾಗೂ ಇತ್ತೀಚೆಗೆ ದಿನಾಂಕ :22-07-2011 ರಂದು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ :27252/2011 ರಲ್ಲಿ ನೀಡಿರುವ ತೀರ್ಪಿನಲ್ಲಿ ಈ ಕೆಳಗಿನಂತೆ ಆದೇಶಿಸಿದೆ.

.........we direct the Government to withdraw the teachers, lecturers, professors and principals, who are working on deputation in other departments other than Educational Institutions in the best interest of the students and the Educational Institutions to get better results in Institutions and Government Aided Institutions.........

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರುಗಳನ್ನು ಹಾಗೂ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರುಗಳು ಮತ್ತು ಪ್ರಾಂಶುಪಾಲರುಗಳನ್ನು ಬೋಧಕೇತರ ಕಾರ್ಯಗಳಿಗೆ/ಕಛೇರಿಗಳಿಗೆ ನಿಯೋಜಿಸಿದಲ್ಲಿ ನ್ಯಾಯಾಲಯದ ನಿಂದನೆಗೆ ಗುರಿಯಾಗಬೇಕಾಗುವುದರಿಂದ ಸದರಿ ಬೋಧಕರುಗಳನ್ನು ಯಾವುದೇ ಕಾರಣಕ್ಕೂ ಬೋಧಕೇತರ ಕಾರ್ಯಗಳಿಗೆ/ಕಛೇರಿಗಳಿಗೆ ನಿಯೋಜನೆ ಮಾಡುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.

(ಜಿ.ಕುಮಾರ ನಾಯಕ್)
ಸರ್ಕಾರದ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.
(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)

ಸ್ವೀಕರಿಸಿದೆ 03/12/11
ದಿನಾಂಕ

ಕರ್ನಾಟಕ ಸರ್ಕಾರದ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ, ಸಿ4(3), ಸುತ್ತೋಲೆ/01/2010-11

ದಿನಾಂಕ: 30-11-2011

ಜ್ಞಾಪನ

ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 300 ಡಿ.ಜಿ.ಡಿ 2011, ದಿನಾಂಕ: 08.11.2011 ರ ಯಥಾ ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ
2. [illegible]
3. ಕಚೇರಿ ಪ್ರತಿ.